O.S .No.12/2012
DW-2

ದಿನಾಂಕ: 06.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ವಾದಿ ಪರ ಶ್ರೀ ಬಿ.ಎಸ್.ವೈ. ವಕೀಲರಿಂದಃ</u>

ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತು. ವಾದಿಗಳ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿರುತ್ತಾರೆ. ದಾವಾ ಆಸ್ತಿ ಸ.ನಂ. ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಜಮೀನು ಗೊತ್ತು ಎಂದು ಹೇಳುತ್ತಾರೆ. ರಾಜೇಗೌಡ ಕೃಷ್ಣೇಗೌಡ ಮತ್ತು ನಿಂಗಮ್ಮ ದಾವಾ ಆಸ್ತಿಯನ್ನು ನನಗೆ ಬರೆದುಕೊಟ್ಟಿರುತ್ತಾರೆ. ದಾವಾ ಆಸ್ತಿಯನ್ನು ಬರೆದುಕೊಟ್ಟ ಬಗ್ಗೆ ದಾಖಲಾತಿ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ತಮ್ಮನ ಮಕ್ಕಳು ತೆಗೆದುಕೊಂಡರು, ನನ್ನ ಬಳಿ ಈಗ ಇಲ್ಲ ಎಂದು ಹೇಳುತ್ತಾರೆ. ಏನು ದಾಖಲಾತಿ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ ದಾನ ಪತ್ರ ಎಂದು ಹೇಳುತ್ತಾರೆ. ದಾನ ಪತ್ರ ಬರೆದುಕೊಟ್ಟಿದ್ದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ದಾನ ಪತ್ರ ನೊಂದಣಿಯಾಗಿತ್ತು. ನಿಮ್ಮ ತಮ್ಮನ ಮಕ್ಕಳು ದಾಖಲಾತಿಯನ್ನು ತೆಗೆದುಕೊಂಡ ನಂತರ ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದೂರು ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ದಾನ ಪತ್ರವನ್ನು ವಾದಿಗಳು ತೆಗೆದುಕೊಂಡರು ಅದಕ್ಕೆ ನಾನು ಪೊಲೀಸರ ಸಮಕ್ಷಮ ದೂರು ಕೊಟ್ಟಿದ್ದೆ ಎಂಬ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ವಿಚಾರವನ್ನು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ನಿಮ್ಮ ಪ್ರಮಾಣ ಪತ್ರ ಸುಳ್ಳು ಎಂದರೆ ಹೌದು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಎಲ್ಲ ಬರೆದಿದೆ ಎಂದು ಹೇಳುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿಲ್ಲದೇ ಇದ್ದರೂ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾನ ಪತ್ರ ನೊಂದಣಿಯಾಗಿದ್ದರೆ, ಉಪನೊಂದಣಾ ಕಚೇರಿಯಲ್ಲಿ ಅದರ ದೃಢೀಕೃತ ನಕಲನ್ನ ಪಡೆಯಬಹುದು ಎಂದರೆ ಸರಿ. ದಾನ ಪತ್ರವನ್ನು ಉಪನೊಂದಣಾ ಕಚೇರಿಯಿಂದ ದೃಢೀಕೃತ ನಕಲು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಕೊಡುತ್ತೇನೆ ಎಂದು ಹೇಳುತ್ತಾರೆ.

ದಾವಾ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನ ಮಗಳಿಗೆ ಸೇರಿದ್ದು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಬರೆದುಕೊಟ್ಟಿದ್ದರು, ನಾನು ನನ್ನ ಮಗಳಿಗೆ ಬರೆದುಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಮಗೆ ಯಾವುದೇ ದಾನ ಪತ್ರ ಬರೆದುಕೊಟ್ಟಿಲ್ಲದೇ ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣಾ ಪತ್ರದಲ್ಲಿ ದಾನ ಪತ್ರದ ವಿಚಾರ ಬರೆಸಿಲ್ಲದೇ ಇರುವುದರಿಂದ, ನ್ಯಾಯಾಲಯದ ಮುಂದೆ ಸುಳ್ಳು

ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿಕೆ ಮೇರೆಗೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿರುತ್ತಾರೆಂದು ನಮೂದು ಮಾಡಿಸಿರುತ್ತೀರಿ ಎಂದರೆ ಸರಿ. ಹೇಳಿಕೆ ಖಾತೆಗೆ ಮಾನ್ಯತೆ ಇಲ್ಲ, ಈಗ ವಾದಿಯ ಹೆಸರಿನಲ್ಲೇ ಖಾತೆ ಇದೆ ಎಂದರೆ ಸರಿಯಲ್ಲ. ನಾನು ಅನಕ್ಷರಸ್ಥೆ. ಈಗಲೂ ದಾವಾ ಆಸ್ತಿಯ ಖಾತೆ ವಾದಿಗಳ ಹೆಸರನಲ್ಲಿ ಇದೆ ಎಂದರೆ ಸರಿ. ವಾದಿಗಳ ತಂದೆ ಹಾಗೂ ನಿಮ್ಮ ತಾಯಿ ಯಾವುದೇ ನೊಂದಣಿ ದಾಖಲಾತಿ ಮುಖೇನ ಬರೆದುಕೊಟ್ಟಿಲ್ಲದೇ ಇರುವುದರಿಂದ, ನಿಮಗೆ ಯಾವುದೇ ದಾಖಲಾತಿ ಬರೆದುಕೊಟ್ಟಿಲ್ಲದೇ ಇರುವುದರಿಂದ, ಪ್ರತಿವಾದಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ, ನಿಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಪ್ರತಿವಾದಿಗೆ ಸಹಾಯ ಮಾಡಲು ಹೇಳಿಕೆ ಖಾತೆಯಾಗಿತ್ತು ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಮಗಳು ಈಗ ವಾಸ ಇರುವುದು ಬೆಂಗಳೂರಿನಲ್ಲಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗಳನ್ನು ಬೆಂಗಳೂರಿನಲ್ಲಿ ಇರಿಸಿಕೊಂಡವರು ಮೃತಪಟ್ಟಿದ್ದು, ಅಲ್ಲಿ 30 ವರ್ಷಗಳಿಂದ ಇದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಕುಳ್ಳೇಗೌಡ ಹಾಗೂ ಕೆಂಗೇಗೌಡರ ಜಮೀನು, ಉತ್ತರಕ್ಕೆ ಕೆಂಗೇಗೌಡರು, ಪೂರ್ವಕ್ಕೆ ಕುಳ್ಳೇಗೌಡ ಮತ್ತು ದಕ್ಷಿಣಕ್ಕೆ ಹೊಟ್ಟೆಗೌಡರು ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಈಗಲೂ ವಾದಿಗಳೇ ಸ್ವಾಧೀನ ಇರುವುದು ಎಂದರೆ ಸರಿ. ದಾವಾ ಆಸ್ತಿಗೂ, ನಿಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ವಾದಿಗಳಿಗೆ ತೊಂದರೆ ಕೊಡಲು ನಿಮ್ಮ ಮಗಳ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.